ಡಾಲ್ ಹೌಸಿ ಸ್ಟಾಪಲ್ಲಿ ಹೆಚ್ಚುಕಮ್ಮಿ ಬಸ್ಸಲ್ಲಿದ್ದ ಜನ ಖಾಲಿಯಾದ್ರು. ಕಂಡಕ್ಟರ್ ನಮ್ಮ ಸೀಟ್ ಹತ್ತಿರ ಬಂದು ಕಿ... ಕಿ... ಅಂತ ನಗ್ತಾ ಅವರಿಗೆ ಹೇಳಿದ, ''ದಾದಾ, ನಿಮ್ಮ ಹುಡುಗಿ ಟಿಕೆಟ್ ತಗೊಂಡಾಯ್ತು. ನೀವು ಒಂದೇ ಟಿಕೆಟ್ ತಗೊಳಿ ಸಾಕು".

ಅವರು ಜೋರಾಗಿ ಕೂಗಿ ಕೇಳಿದರು, ''ಮಂಜು, ಟಿಕೆಟ್ ತಗೊಂಡಿದಿ ತಾನೇ?"

ಕಂಡಕ್ಟರ್ ವ್ಯಂಗ್ಯವಾಗಿ ಬಹಳ ಹಗುರವಾಗಿ ಹೇಳಿದ, "ಹಾಂ, ಹಾಂ, ಅವಳಾಗಲೇ ಟಿಕೆಟ್ ತಗೊಂಡಳು''.

ಹೌರಾ ಬಸ್ ಸ್ಟಾಪ್ ಬಂದಾಗ ಎಲ್ಲರೂ ಬಸ್ಸಿಂದ ಇಳಿದರು. ಆದರೆ, ಯಾರೂ ಚಿಕ್ಕ ವಯಸ್ಸಿನ ಹುಡುಗಿ ಇಳಿಯೋದು ನಾನು ನೋಡಲಿಲ್ಲ. ಅವರು ಡ್ರೈವರ್ ಹಿಂದಿನ ಖಾಲಿ ಸೀಟಿನ ಕಡೆ ಹೋದರು. ಆಮೇಲೆ ಕೈ ಚಾಚಿ ಹೇಳಿದರು, "ಬಾ ಮಗಾ, ಬಾ. ನಿಧಾನಕ್ಕೆ ಇಳಿ''.

ಕಂಡಕ್ಟರ್ ನಗುತ್ತಾ ಹೇಳಿದ, "ಬೇಗ ಬೇಗ ಇಳೀರಿ, ಗಾಡಿ ಮುಂದೆ ಹೋಗುತ್ತೆ''.

ಅವರಿಗೆ ಕಿರಿಕಿರಿಯಾಯ್ತು, ''ನನ್ಜೊತೆ ಆಟ ಆಡ್ತೀಯಾ? ಕಾಣ್ತಾಯಿಲ್ವಾ? ಮಗೂಗೆ ಎಷ್ಟು ಕಷ್ಟ ಆಗ್ತಾ ಇದೆ ಅಂತ!''

ನಾನು ಸುತ್ತಲೂ ನೋಡಿದೆ. ಎಲ್ಲೂ ಯಾರೂ ಇಲ್ಲ. ಆದರೆ, ಅವರು ಬಸ್ ಇಳಿಯೋದು ನೋಡಿದರೆ ಯಾರನ್ನೋ ಬಹಳ ಎಚ್ಚರಿಕೆಯಿಂದ ಇಳಿಸ್ತಾ ಇದ್ದಂತೆ ಕಾಣಿಸುತ್ತಿತ್ತು. ಯಾರದೋ ಕೈಯನ್ನು ಬಹಳ ಜೋಪಾನವಾಗಿ ಹಿಡಿದುಕೊಂಡು ನಡೆಯುತ್ತಿರುವಂತೆ ಆತ ಹೌರಾ ಸ್ಟೇಷನ್ ಕಡೆ ಹೆಜ್ಜೆ ಹಾಕಿದ್ದು ನನಗೆ ಕಾಣಿಸಿತು.

### ಮಾಯಾ ಸಿದ್ಧಾಂತ

ಪ್ರಸ್ತುತ ಕೋಲ್ಕತ್ತದಲ್ಲಿ ನೆಲೆಸಿರುವ ಮಾಯಾ, 1980ರಲ್ಲಿ ಮಹಿಳೆಯರಿಗಾಗಿ 'ಮಾಲಿನಿ' ಎಂಬ ಪತ್ರಿಕೆ ಶುರು ಮಾಡಿದರು. ಈ ಪತ್ರಿಕೆಯನ್ನು ಇಂದಿಗೂ ಅವರು ನಡೆಸಿಕೊಂಡು ಬರುತ್ತಿದ್ದಾರೆ. 'ಮಾಲಿನಿ ಪ್ರಕಾಶನ'ದಿಂದ ಅನೇಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ತಮ್ಮ 'ಮಣಿಮೇಖಲಾ ಡೈರಿ' ಮತ್ತು 'ಇಂಗ್ಲೆಂಡೆ ದೈಬೇರ್ ಬಶೆ' ಕೃತಿಗಳಿಗೆ ಅನೇಕ ಪುರಸ್ಕಾರಗಳನ್ನು ಪಡೆದಿದ್ದಾರೆ. ಅವರಿಗೆ ಪ್ರವಾಸದಲ್ಲಿ ತುಂಬಾ ಆಸಕ್ತಿ. ದೇಶವಿದೇಶಗಳನ್ನು ಸುತ್ತಿರುವುದಲ್ಲದೆ, ಭಾರತದಾದ್ಯಂತ ಪ್ರವಾಸ ಮಾಡಿದ್ದಾರೆ.

### ನಾಗಮಣಿ ಎಸ್.ಎನ್.

ಮೂಲತಃ ಮಂಡ್ಯ ಜಿಲ್ಲೆ ಶಿವಾರ ಗ್ರಾಮದವರು; ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಕನ್ನಡ ಪ್ರಾಧ್ಯಾಪಕಿಯಾಗಿದ್ದರು. ಶಿಕ್ಷಣ ಕ್ಷೇತ್ರ, ಭಾಷಾ ಬೋಧನೆ, ಮಹಿಳಾ ವಿಷಯಗಳಲ್ಲಿ ಆಸಕ್ತಿ. ಪ್ರಸ್ತುತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಭಾಷಾಂತರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ.

### ಸರಸಿಜ್ ರಾಯ್ ಚೌಧುರಿ

ಮೂಲತಃ ಕೋಲ್ಕತ್ತದವರು. ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಬೆಂಗಳೂರಿನಲ್ಲಿರುವ ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ಅಧ್ಯಯನ ನಡೆಸಿ ಭೌತಶಾಸ್ತ್ರದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಕನ್ನಡ, ಬಂಗಾಳಿ, ಇಂಗ್ಲಿಷ್ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ. ಪ್ರಸ್ತುತ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದಾರೆ.